UNIVERSITY LIBRARY
TUESDAY 02-09-2025
Agri Newspaper Clippings
For more information visit University Library Website
Web - uasbagrilibindia.org
E-mail- librarian@uasbangalore.edu.in
Vijayavani pg 02

ಕಲ್ಪತರುವಿಗೆ ನೂರೆಂಟು ಸಂಕಷ್ಟ

ಇಳುವರಿ ಕುಂಠಿತದಿಂದ ಬೆಳೆಗಾರರು ಹೈರಾಣ | ಮರಳಲಿ ತೆಂಗಿನ ಗತವೈಭವ

ತುಮಕೂರು ಸೇರಿ ಕರ್ನಾಟಕದ 17 ಜಿಲ್ಲೆಗಳ 134 ತಾಲೂಕುಗಳಲ್ಲಿ ತೆಂಗು ಬೆಳೆಯುವ ರೈತರ ಬದುಕು ಸಂಕಷ್ಟಕ್ಕೆ ಒಳಗಾಗಿದೆ. ಬೇಡಿದ್ದೆಲ್ಲವನ್ನೂ ನೀಡುವ 'ಕಲ್ಪವೃಕ್ಷ' ರೈತರ ಮೇಲೆ ಮುನಿದಿದೆ, ಇಳುವರಿ ಗಣನೀಯವಾಗಿ ಕುಂಠಿತವಾಗಿದೆ. ವಿವಿಧ ರೋಗಗಳಿಂದ ತೋಟಗಳಲ್ಲಿ ತೆಂಗಿನ ಗತವೈಭವ ಮರೆಯಾಗಿದೆ. ತೆಂಗು ಬೆಳೆಗಾರರನ್ನು ಉಳಿಸಲು ಸಾಧ್ಯವಾಗುವ 'ನೀರಾ ನೀತಿ'ಗೆ ರಾಜ್ಯದಲ್ಲಿ ಎಳ್ಳುನೀರು ಬಿಡಲಾಗಿದೆ. ರೈತರು ಬಯಸುವ ಸಿಹಿನೀರಾ ನೀತಿ, ಎಳನೀರು ಮಾರುಕಟ್ಟೆ, ಸಂಶೋಧನಾ ಪಾರ್ಕ್, ಮೌಲ್ಯವರ್ಧನೆ ಹಾಗೂ ಮಾರುಕಟ್ಟೆ ಸೃಷ್ಟಿಸಲು ತೆಂಗು ಉತ್ಪಾದಕರ ಸಹಕಾರ ಸಂಘ ಬೇಡಿಕೆಯಾಗಿಯೇ ಉಳಿದಿವೆ. ಸದಾ ರೈತಪರವಾಗಿರುವ **ವಿಜಯವಾಣಿ** ಸೆ.2 ವಿಶ್ವ ತೆಂಗು ದಿನದ ಹಿನ್ನೆಲೆಯಲ್ಲಿ ಈ ಬಗ್ಗೆ ಬೆಳಕು ಚೆಲ್ಲಿದೆ.



ಇಂದು ವಿಶ್ವ ತೆಂಗು ದಿನ

ವಿ|ವಿ|ಶೇ|ಷ

ಏಷ್ಯಾದಲ್ಲಿಯೇ ಅತಿ ದೊಡ್ಡ ಕೊಬ್ಬರಿ ಮಾರುಕಟ್ಟೆ ಎನ್ನಿಸಿರುವ ತುಮಕೂರು ಜಿಲ್ಲೆಯ ತಿಪಟೂರು ಎಪಿಎಂಸಿಯಲ್ಲಿ ಇತ್ತೀಚಿನ ವರ್ಷದವರೆಗೂ ಬಿಳಿಬೀಟಿ ವ್ಯವಹಾರದ ಮೂಲಕವೇ ರೈತರನ್ನು ಶೋಷಿಸಲಾಗಿತ್ತು. ಇತ್ತೀಚೆಗೆ ಜಾರಿಗೊಳಿಸಿದ ಇ-ಟೆಂಡರ್ ವ್ಯವಸ್ಥೆ ಹಾಗೂ ಹರಾಜು ದಿನಾಂಕ ಬದಲಾವಣೆ ಸೇರಿ ವಿವಿಧ ಕ್ರಾಂತಿಕಾರಕ ನಿರ್ಧಾರದಿಂದ ಕೊಬ್ಬರಿಗೆ ನೈಜ ಬೆಲೆ ಸಿಗಲಾರಂಭಿಸಿದೆ. 19 ಸಾವಿರ ರೂ. ಉತ್ಪಾದನಾ ವೆಚ್ಚವಿರುವ ಕ್ವಿಂಟಾಲ್ ಕೊಬ್ಬರಿ ಬೆಲೆ 12 ಸಾವಿರ ರೂ. ಆಸುಪಾಸಿನಲ್ಲಿಯೇ ಇರುತ್ತಿತ್ತು. ಈಗ ಬರೋಬ್ಬರಿ 30 ಸಾವಿರ ರೂ. ತಲುಪಿರುವುದು ಸಾರ್ವಕಾಲಿಕ ಸೋಜಿಗ ಎನ್ನಿಸಿದೆ. ಈ ಬೆಲೆಯೇ ಇದ್ದರೆ ತೆಂಗು ಬೆಳೆಗಾರರಿಗೆ ತೊಂದರೆ ಇಲ್ಲ. ಆದರೆ, ಇದೇ ಬೆಲೆಯನ್ನು ಉಳಿಸಿಕೊಳ್ಳಲು ರವಾನೆದಾರರು, ವ್ಯಾಪಾರಸ್ಥರಿಗೆ ಮನಸ್ಸಿಲ್ಲ. ವಿವಿಧ ಮಾರುಕಟ್ಟೆ ತಂತ್ರಗಳನ್ನು ಪ್ರಯೋಗಿಸಿ ಬೆಲೆ ಇಳಿಸುವ ಚಾಳಿಗೆ ಇತಿಶ್ರೀ ಹಾಡಬೇಕಿದೆ. ಆನ್‌ಲೈನ್ ಮಾರುಕಟ್ಟೆಯಲ್ಲಿ ತೆಂಗಿಗಿರುವ ಬೇಡಿಕೆಯನ್ನು ಉಳಿಸಿಕೊಳ್ಳಬೇಕಿದೆ.

ತೆಂಗಿನ ಮಟ್ಟೆ, ಚಿಪ್ಪಿಗೂ ಬೇಕಿದೆ ಮೌಲ್ಯವರ್ಧನೆ: ಪ್ರಸ್ತುತ ಮಾರುಕಟ್ಟೆಯಲ್ಲಿ ತೆಂಗಿನ ಮಟ್ಟೆ ಹಾಗೂ ಚಿಪ್ಪು ಒಳ್ಳೆಯ ಬೆಲೆಗೆ ಮಾರಾಟವಾಗುತ್ತಿದ್ದು, ಸದಾ ಕಾಲವೂ ಇದಕ್ಕೆ ಮಾರುಕಟ್ಟೆ ಒದಗಿಸುವ ಸವಾಲಿದೆ. ತೆಂಗಿನ ಮಟ್ಟೆ ಉಪಯೋಗಿಸಿಕೊಂಡು ಪೀಠೋಪಕರಣ ತಯಾರಿಸುವ ಉದ್ಯಮ ಆರಂಭಿಸಲು ಯುವಕರಿಗೆ ಸಹಾಯಧನ ನೀಡುವ ಯೋಜನೆ ಕೈಬಿಡಲಾಗಿದೆ. ಕೇರಳದಲ್ಲಿರುವ ತೆಂಗಿನ ನಾರು ಅಭಿವೃದ್ಧಿ ಮಂಡಳಿಯಲ್ಲಿ ಭರಪೂರ ಅನುದಾನ ಲಭ್ಯವಿದ್ದು, ಅದನ್ನು ಬಳಸಿಕೊಳ್ಳುವಲ್ಲಿ ಕರ್ನಾಟಕದ ರೈತರು ಹಿಂದೆ ಬಿದ್ದಿದ್ದಾರೆ. ಮಂಡಳಿಯ ಶೇಕಡ 90 ಅನುದಾನ ಕೇರಳ ಹಾಗೂ ತಮಿಳುನಾಡಿನ ರೈತರು ಬಳಸಿಕೊಳ್ಳುತ್ತಿದ್ದಾರೆ. ನಾರು ಬಳಸಿಕೊಂಡು ಉದ್ಯಮ ಸ್ಥಾಪಿಸಲು ಅವಕಾಶವಿದ್ದು, ಈ ಬಗ್ಗೆ ವೈಜ್ಞಾನಿಕವಾದ ಅಧ್ಯಯನ ನಡೆಸಿ ರೂಪಿಸಿದ್ದ ಮಹತ್ವಾಕಾಂಕ್ಷಿಯ 400 ಕೋಟಿ ರೂ. ಯೋಜನೆ ನನೆಗುದಿಗೆ ಬಿದ್ದಿದೆ. ಯೋಜನೆ ಒಪ್ಪಿ ಆರಂಭದಲ್ಲಿ 86 ಕೋಟಿ ರೂ. ನೀಡಿದ್ದ ರಾಜ್ಯ ಸರ್ಕಾರ ಯೋಜನೆ ಪೂರ್ಣಗೊಳಿಸಲು 4 ವರ್ಷದ ಕಾಲಮಿತಿ ನೀಡಿತ್ತು. ಸಣ್ಣ ಕೈಗಾರಿಕೆ ಇಲಾಖೆ 30 ಕೋಟಿ ರೂ. ಮಾತ್ರ ಖರ್ಚು ಮಾಡಿ ಉಳಿದ ಹಣ ವಾಪಸಾಗಿ ಯೋಜನೆ ನನೆಗುದಿಗೆ ಬಿದ್ದಿದೆ. ಡಾಂಬರ್, ಕಾಂಕ್ರೀಟ್ ರಸ್ತೆ ನಿರ್ಮಾಣದಲ್ಲಿಯೂ ತೆಂಗಿನ ನಾರನ್ನು ಬಳಸಿಕೊಂಡರೆ ತೇವಾಂಶ ಹೀರುತ್ತದೆ, ರಸ್ತೆಯ ಗುಣಮಟ್ಟ ಹೆಚ್ಚಿಸಬಹುದು ಎಂಬುದು ವೈಜ್ಞಾನಿಕವಾಗಿ ದೃಢವಾಗಿದ್ದರೂ ಅದನ್ನು ಬಳಸಲು ಅಧಿಕಾರಿಗಳು ಮುಂದಾಗುತ್ತಿಲ್ಲ.

ಕಾಂಡ ಸೋರುವ ರೋಗ: ಕಾಂಡ ಸೋರುವ ರೋಗ. ಇದು ಶಿಲೀಂದ್ರದಿಂದ ಬರುತ್ತದೆ. ರೋಗಕ್ಕೆ ತುತ್ತಾದ ಮರಗಳ ಗರಿಗಳು ಒಣಗಿ ಮರದಲ್ಲೇ ನೇತಾಡುತ್ತಿರುತ್ತವೆ. ಕಾಂಡದ ಬಿರುಕುಗಳಿಂದ ಕಪ್ಪು, ಕಂದು ಬಣ್ಣದ ದ್ರವ ಹೊರಗೆ ಬರುತ್ತದೆ. ಕ್ರಮೇಣ ರೋಗ ಉಲ್ಬಣವಾದಂತೆ ಹರಳು, ಎಳನೀರು, ಕಾಯಿಗಳು ಉದುರಿ ಪೂರ್ತಿ ಮರ ಒಣಗುತ್ತದೆ.

ಫೆಡರೇಷನ್ ಬೇಡಿಕೆ ಈಡೇರಿಲ್ಲ: ತೆಂಗು ವಲಯ ಹಾಗೂ ಮೌಲ್ಯವರ್ಧನೆಗೆ ಪೂರಕವಾಗಿ ಕೆಎಂಎಫ್ ಮಾದರಿಯಲ್ಲಿ ಸಹಕಾರ ಸಂಸ್ಥೆ ಸ್ಥಾಪಿಸಬೇಕು ಎಂದು ಕೂಗು ಇದೆ. ಸಿಹಿನೀರಾ, ಎಳನೀರು, ಕಾಯಿ, ಕೊಬ್ಬರಿ, ಮಟ್ಟೆ, ಚಿಪ್ಪು, ನಾರು ಸೇರಿ ಕಲ್ಪವೃಕ್ಷದಿಂದ ಉತ್ಪಾದನೆಯಾಗುವ ಎಲ್ಲ ವಸ್ತುಗಳಿಗೂ ಮೌಲ್ಯವರ್ಧನೆ ಮಾಡಿ ಜಾಗತಿಕವಾಗಿ ಮಾರುಕಟ್ಟೆ ವಿಸ್ತರಿಸಿ ಬೇಡಿಕೆ ಹೆಚ್ಚಿಸುವ ನಿಟ್ಟಿನಲ್ಲಿ ಸಹಕಾರ ಸಂಘಗಳು ಕೆಲಸ ಮಾಡಲು ಸಾಧ್ಯವಿದೆ. ಪ್ರತಿಗ್ರಾಮದಲ್ಲಿಯೂ ಸಹಕಾರ ಸಂಘಗಳು ಆರಂಭವಾದರೆ ತೆಂಗು ಹಾಗೂ ತೆಂಗು ನಂಬಿರುವ ರೈತರು ಉಳಿಯಲು ಸಾಧ್ಯ.

ಕಾಡುತ್ತಿದೆ ರೋಗಬಾಧೆ

ರಾಮನಗರ ಜಿಲ್ಲೆಯಲ್ಲಿ 33 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ತೆಂಗು ಬೆಳೆಯಲಾಗುತ್ತಿದೆ. ಆದರೆ, ನೀರಿನ ಕೊರತೆಯಿಂದ ಜಿಲ್ಲೆಯಲ್ಲಿ ನುಸಿ ಮತ್ತು ಕಪ್ಪುತಲೆ ಹುಳು ಬಾಧೆ ಹೆಚ್ಚಿದ್ದು, ಇಳುವರಿ ಕುಂಠಿತವಾಗುತ್ತಿದೆ. ಜಿಲ್ಲೆಯ ಮಾಗಡಿ ತಾಲೂಕಿನ ಚಂದೂರಾಯರಹಳ್ಳಿ ಬಳಿ ಇರುವ ಕೃಷಿ ವಿಜ್ಞಾನ ಕೇಂದ್ರದಲ್ಲಿ 3 ಕೋಟಿ ರೂ. ವೆಚ್ಚದಲ್ಲಿ ತೆಂಗು ಸಂಸ್ಕರಣ ಘಟಕ ನಿರ್ಮಾಣ ಮಾಡಲಾಗಿದೆ ಯಾದರೂ ಇನ್ನು ಇದು ಕಾರ್ಯಾಚರಣೆ ಆರಂಭಿಸದಿರುವುದು ರೈತರಿಗೆ ಪ್ರಯೋಜನಕ್ಕೆ ಬಾರದಂತಾಗಿದೆ.

'ಒಂದು ಜಿಲ್ಲೆ ಒಂದು ಉತ್ಪನ್ನ'ಕ್ಕೆ ನಿರಾಸಕ್ತಿ

ರೈತರು, ಯುವಕರು ಸ್ವಾವಲಂಬಿಗಳಾಗಬೇಕು ಎಂಬ ಉದ್ದೇಶದಿಂದ ಕೇಂದ್ರ ಸರ್ಕಾರ ಘೋಷಿಸಿದ 'ಒಂದು ಜಿಲ್ಲೆ, ಒಂದು ಉತ್ಪನ್ನ' ಯೋಜನೆಗೆ ತುಮಕೂರು ಹಾಗೂ ರಾಮನಗರದಲ್ಲಿ ತೆಂಗು ಆಯ್ಕೆಯಾದರೂ ಪ್ರಯೋಜನ ಪಡೆದವರ ಸಂಖ್ಯೆ 10 ದಾಟಿಲ್ಲ. ಉತ್ಪನ್ನಗಳ ಆಧಾರಿತ ಸಂಸ್ಕರಣಾ ಘಟಕ ತೆರೆಯಲು ಶೇ.35 ಸಹಾಯಧನದೊಂದಿಗೆ (ಗರಿಷ್ಠ 10 ಲಕ್ಷ ರೂ.) ಸಾಲ ಸೌಲಭ್ಯ ನೀಡಲಾಗಿದೆ. ಕೇಂದ್ರ ಸರ್ಕಾರದ ಈ ಮಹತ್ವಾಕಾಂಕ್ಷಿ ಯೋಜನೆಗೆ ಜಿಲ್ಲೆಯಲ್ಲಿ ಉತ್ತಮ ಸ್ಪಂದನೆ ಸಿಕ್ಕಿಲ್ಲ. ಅಧಿಕಾರಿಗಳೂ ಉತ್ಸಾಹ ತೋರಿಸುತ್ತಿಲ್ಲ. ತೆಂಗಿಗೆ ಸಂಬಂಧಿಸಿದ ಕೊಬ್ಬರಿ ಎಣ್ಣೆ, ಬಿಸ್ಕೆಟ್, ಕ್ರೀಮ್, ಪೌಡರ್, ಐಸ್‌ಕ್ರೀಮ್ ಮೊದಲಾದ ಸುಮಾರು 30 ಬಗೆಯ ತೆಂಗು ಉತ್ಪನ್ನಗಳನ್ನು ತಯಾರಿಸುವ ಅವಕಾಶವಿದೆ.

ಸಿಹಿ ನೀರಾ ಇಳಿದರಷ್ಟೇ ತೆಂಗಿಗೆ ಉಳಿಗಾಲ

ನೀರಾ ಚಳವಳಿಯನ್ನು ಯಶಸ್ವಿಯಾಗಿ ಹತ್ತಿಕ್ಕಲಾಗಿದೆ. ಹಿಂದಿನಿಂದಲೂ ಸಿಹಿನೀರಾ ಇಳಿಸಲು ಬೇಡಿಕೆಯಿದ್ದರೂ ಸರ್ಕಾರಗಳು ಮನಸ್ಸು ಮಾಡಿಲ್ಲ. ನೀರಾ ಸೇವನೆಯಿಂದ ರೋಗನಿರೋಧಕ ಶಕ್ತಿ ಹೆಚ್ಚಾಗುತ್ತದೆ. ನರದೌರ್ಬಲ್ಯ ಹೊಂದಿದವರಿಗೆ ನೀರಾ ದಿವ್ಯ ಔಷಧ. ನೀರಾದಿಂದ ಬೆಲ್ಲ, ಕಲ್ಲುಸಕ್ಕರೆ, ಜ್ಯೂಸ್, ಜಾಮ್, ಚಾಕಲೇಟ್, ಬಿಸ್ಕೆಟ್, ಸಿರಪ್, ಇನ್ನಿತರ ಸಿಹಿತಿಂಡಿ ತಯಾರಿಸಬಹುದು. ಇದರಿಂದ ತೆಂಗು ಬೆಳೆಗಾರರು ಆಧುನಿಕ ಜೀವನಶೈಲಿಯ ಜನರಿರುವ ಪ್ರಪಂಚದಲ್ಲಿ ಮಾರುಕಟ್ಟೆ ಸೃಷ್ಟಿಸಿಕೊಳ್ಳಬಹುದು.

ಗಂಗಾಪಾಣಿ ಎಳನೀರು!

ತುಮಕೂರು ಜಿಲ್ಲೆಯ ಎಳನೀರು ವಿಶಿಷ್ಟ ರುಚಿಯಿಂದ ಪ್ರಖ್ಯಾತಿ ಪಡೆದಿದೆ, ತಿಪಟೂರು ತಾಲೂಕಿನ ಹೊನ್ನವಳ್ಳಿ ಮೂಲ 'ಗಂಗಾಪಾಣಿ' ತಳಿಯ ಎಳನೀರಿಗೆ ದೀರ್ಘ ಇತಿಹಾಸವಿದೆ. ಮೈಸೂರು ಮಹಾರಾಜರು ಈ ಗಂಗಾಪಾಣಿ ಎಳನೀರನ್ನು ಬಯಸಿ ಕುಡಿಯುತ್ತಿದ್ದರು. ಪರಂಗಿಹಣ್ಣಿನ ಆಕಾರದ ಈ ಎಳನೀರು ಸಿಹಿ ಜತೆಗೆ ವಿಶೇಷವಾದ ಸುಗಂಧ. 250 ಎಂಎಲ್ ನೀರು ಒಂದು ಕಾಯಲ್ಲಿ ಸಿಗುತ್ತದೆ. ಆದರೆ, ಕೊಬ್ಬರಿಯ ಆಸೆಯಿಂದ ಈ ತಳಿಯ ತೆಂಗಿನ ಮರ ಕಡಿಮೆಯಾಗಿದೆ. ಹವಾಮಾನದ ವೈಪರೀತ್ಯದಿಂದ ನೀರಿನ ಪ್ರಮಾಣ ಕೂಡ ಕಡಿಮೆಯಾಗುತ್ತಿರುವುದು ರೈತರಲ್ಲಿ ಆತಂಕ ಹೆಚ್ಚಿಸಿದೆ.

ಗುಣಮಟ್ಟದ ಇಳುವರಿ ಕುಂಠಿತ

ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ತೆಂಗು ಬೆಳೆಯನ್ನು 150 ಹೆಕ್ಟೇರ್ ಪ್ರದೇಶದಲ್ಲಿ ಬೆಳೆಯಲಾಗುತ್ತಿದೆ. ಗುಣಮಟ್ಟದ ಇಳುವರಿ ಸಮಸ್ಯೆ ಹಿನ್ನೆಲೆಯಲ್ಲಿ ಸ್ಥಳೀಯ ಉತ್ಪನ್ನಗಳಿಗಿಂತಲೂ ಹೊರಭಾಗದಿಂದ ಪೂರೈಕೆಯ ಅವಲಂಬನೆ, ಮರದಿಂದ ತೆಂಗಿನ ಕಾಯಿ ಇಳಿಸುವಿಕೆ, ಸಾಗಾಣಿ ಸೇರಿ ನಿರ್ವಹಣೆ ವೆಚ್ಚ ದುಬಾರಿಯಾಗಿದೆ. ಸ್ಥಳೀಯವಾಗಿ ಸೂಕ್ತ ಮಾರುಕಟ್ಟೆ ವ್ಯವಸ್ಥೆ ಇಲ್ಲದ ಹಿನ್ನೆಲೆಯಲ್ಲಿ ಮಧ್ಯವರ್ತಿಗಳ ಹಾವಳಿ ಹೆಚ್ಚಿದೆ.

ಸಾವಯವ ಗೊಬ್ಬರದ ಕೊರತೆ

ಚಿತ್ರದುರ್ಗ ಜಿಲ್ಲೆಯ ತೆಂಗು ತಿಪಟೂರು ಮಾರುಕಟ್ಟೆಗೆ ಹೋಗುತ್ತದೆ. ವ್ಯಾಪಾರಸ್ಥರು ತೋಟಗಳಿಗೆ ಬಂದು ತೆಂಗಿನಕಾಯಿಗಳನ್ನು ಖರೀದಿಸುವುದರಿಂದ ಮಾರುಕಟ್ಟೆ ಸಮಸ್ಯೆ ಇಲ್ಲ. ಆದರೆ, ಒಂದು ಕಡೆ ರೋಗಬಾಧೆ, ಎಳನೀರು ಆಗುವುದಕ್ಕಿಂತ ಮುಂಚೆ ಕೊಯ್ಲು ಮಾಡುವುದು, ನಿರ್ವಹಣೆ ಕೊರತೆ, ಸಾವಯವ ಗೊಬ್ಬರದ ಕೊರತೆ ಕಾರಣಕ್ಕೆ ಗೊನೆಗಳಲ್ಲಿ ಗುಣಮಟ್ಟ ಕುಸಿತವಾಗುತ್ತಿದೆ ಎನ್ನುತ್ತಾರೆ ತೋಟಗಾರಿಕೆ ಇಲಾಖೆ ಅಧಿಕಾರಿಗಳು.

ಅತಿವೃಷ್ಟಿಯಿಂದ ಭಾರಿ ಹಾನಿ

ದಾವಣಗೆರೆ ಜಿಲ್ಲೆಯಲ್ಲಿ 7500 ಹೆಕ್ಟೇರ್‌ನಲ್ಲಿ ತೆಂಗು ಬೆಳೆಯಲಾಗುತ್ತದೆ. ಹರಿಹರ ಮತ್ತು ದಾವಣಗೆರೆ ತಾಲೂಕುಗಳಲ್ಲಿ ತೆಂಗು ಕೃಷಿ ಜಾಸ್ತಿ ಇದೆ. ಕಳೆದ ಎರಡು ವರ್ಷಗಳಿಂದ ಮಳೆ ಹೆಚ್ಚಾಗಿದೆ. ಇದರಿಂದ ಶೇ.50-80ರಷ್ಟು ಇಳುವರಿ ಕುಸಿತ ಕಂಡಿದೆ. ಈ ಹಿಂದೆ ಒಂದು ತೆಂಗಿನ ಗಿಡದಲ್ಲಿ 130-140 ಕಾಯಿಗಳ ಇಳುವರಿ ಬರುತ್ತಿತ್ತು. ಈಗ ಕೇವಲ 20-30 ಕಾಯಿ ಬಂದರೆ ಹೆಚ್ಚು ಎನ್ನುತ್ತಾರೆ ರೈತರು. ಇಳುವರಿ ಕುಸಿತ ಕಂಡಿರುವುದರಿಂದ ದರ ಹೆಚ್ಚಾಗಿದೆ. ಕೆಜಿಗೆ 24 ರೂ. ಇದ್ದ ದರ ಈಗ 59-62 ರೂ.ಗಳಿಗೆ ಏರಿಕೆಯಾಗಿದೆ.

ಕೈಕೊಟ್ಟ ಫಸಲು

ಹಾಸನ ಜಿಲ್ಲೆಯಲ್ಲಿ ತೆಂಗು ಬೆಳೆಗೆ ತಗುಲಿರುವ ಮಾರಕ ಕಪ್ಪುತಲೆ ಹುಳು ಬಿಳಿನೊಣ (ವೈಟ್‌ಫ್ಲೈ) ವನ್ನು ನಿಯಂತ್ರಿಸುವುದು ಸವಾಲಾಗಿ ಪರಿಣಮಿಸಿದೆ. ಹಾಸನ ಜಿಲ್ಲೆಯ ಅರಸೀಕೆರೆ ತಾಲೂಕಿನ ಗಂಡಸಿ, ಜಾವಗಲ್, ಬಾಣಾವರ, ಕಸಬಾ ಹಾಗೂ ಕಣಕಟ್ಟೆ ಹೋಬಳಿ ವ್ಯಾಪ್ತಿಯಲ್ಲಿ ಅಂದಾಜು 52 ಸಾವಿರ ಹೆಕ್ಟೇರ್‌ನಲ್ಲಿ ತೆಂಗು ಬೆಳೆಯಲಾಗಿದ್ದು, ರಸಸೋರುವಿಕೆ, ಕಪ್ಪುತಲೆ ಹುಳುವಿನ ಬಾಧೆ, ಗರಿ ರೋಗ ಸೇರಿದಂತೆ ಹಲವು ಕಾರಣದಿಂದಾಗಿ ಪ್ರಸ್ತ ಅವಧಿಯಲ್ಲಿ ಫಸಲು ಕೈಕೊಟ್ಟಿದೆ. ಲಕ್ಷಾಂತರ ತೆಂಗಿನ ಮರಗಳು ಗರಿ ಸುಳಿ ಉದುರಿ ಬಿದ್ದು ಹೋಗಿವೆ.



ತೆಂಗು ಬೆಳೆ ಕಪ್ಪುತಲೆ ಹುಳು, ಬಿಳಿನೊಣ, ರಸಸೋರುವಿಕೆ, ಗರಿರೋಗ ಇನ್ನಿತರ ಕಾರಣದಿಂದಾಗಿ ವಿನಾಶದ ಅಂಚಿಗೆ ಬಂದು ನಿಂತಿರುವುದು ನೋವಿನ ಸಂಗತಿ. ಇದರಿಂದಾಗಿ ತೆಂಗು ಆಧಾರಿತ ಉತ್ಪನ್ನಗಳು ಮೂಲೆಗುಂಪಾಗುವ ಸಾಧ್ಯತೆ ಹೆಚ್ಚಿದೆ.

| ಸತೀಶ್ ನಾಗತಿಹಳ್ಳಿ
ಪ್ರಗತಿಪರ ಕೃಷಿಕ, ಅರಸೀಕೆರೆ



ಅರಸೀಕೆರೆ ತಾಲೂಕಿನ ನಾಗತಿಹಳ್ಳಿ ಗ್ರಾಮದ ಆಸುಪಾಸಿನಲ್ಲಿ ತೆಂಗುಬೆಳೆಗೆ ಕಪ್ಪುತಲೆ ಹುಳು ರೋಗ ತಗುಲಿರುವುದು

ನಿಲ್ಲದ ಕಾಡುಪ್ರಾಣಿಗಳ ಕಾಟ

ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಯಲ್ಲಿ ತೆಂಗಿನ ಇಳುವರಿ ಕಳೆದ ಸಾಲಿಗಿಂತ ಈ ಬಾರಿ ಕುಸಿದಿದೆ. ಕೋತಿ ಮತ್ತು ಕಾಡುಪ್ರಾಣಿಗಳ ಕಾಟ, ಸುರುಳಿರೋಗ, ಕಿಟಬಾಧೆ, ನುರಿತ ಕಾರ್ಮಿಕರ ಅಭಾವ, ವಿಪರೀತ ಮಳೆ ಕೃಷಿಕರಿಗೆ ಸವಾಲಾಗಿದೆ. ತಲಪಾಡಿ, ಉಳ್ಳಾಲ, ಮಂಗಳೂರು, ಉಡುಪಿ ಭಾಗದ ಕಡಲ ಕಿನಾರೆಯ ತೆಂಗಿನ ತೋಟಗಳಲ್ಲಿ ಬಿಳಿ ಕಿಟಬಾಧೆಯಿದ್ದು, ಬೆಳ್ತಂಗಡಿ, ಪುತ್ತೂರು, ಸುಳ್ಯ ಭಾಗಗಳಲ್ಲಿ ಹಲವು ತೋಟಗಳಲ್ಲಿ ಕಂಡುಬಂದಿದೆ.

ಇಕ್ಕಟ್ಟಿಗೆ ಸಿಲುಕಿದ ರೈತರು

ತೆಂಗಿನ ಬೆಲೆ ಏರಿಳಿತ ರೈತನ್ನು ಇಕ್ಕಟ್ಟಿಗೆ ಸಿಲುಕಿಸಿದೆ. ಒಂದೇ ದಿನದಲ್ಲಿ ಬೆಲೆ ಮೂರ್ನಾಲ್ಕು ಸಾವಿರ ತಗ್ಗಿರುವ ನಿದರ್ಶನಗಳೂ ಇವೆ. ಇದು ದಾಸ್ತಾನು ಮಾಡಿರುವ ರೈತರನ್ನು ಚಿಂತೆಗೆ ದೂಡಿದ್ದರೆ, ದಲ್ಲಾಳಿಗಳಿಗೂ ಬೆಲೆ ಏರಿಳಿತದ ಬಿಸಿ ತಟ್ಟಿದ್ದು ಹಲವರು ನಷ್ಟ ಅನುಭವಿಸಿ ಅಂಗಡಿ ಬಂದ್ ಮಾಡಿದ್ದಾರೆ. ಎಳನೀರನ್ನು ರಾಷ್ಟ್ರೀಯ ಪಾನೀಯವೆಂದು ಘೋಷಿಸಿ ಶಾಲಾ ಮಕ್ಕಳ ಬಿಸಿಯೂಟದ ವೇಳೆ ಮಕ್ಕಳಿಗೆ ಎಳನೀರು ನೀಡುವ ಮೂಲಕ ಬೆಳೆಗಾರರನ್ನು ಸರ್ಕಾರ ಪ್ರೋತ್ಸಾಹಿಸಬೇಕು ಎನ್ನುವ ಬೇಡಿಕೆ ರೈತರದ್ದು.

ಹವಾಮಾನ ಬದಲಾವಣೆಯ ಹೊಡೆತ

ಏಷ್ಯಾದ ಅತಿದೊಡ್ಡ ಹಾಗೂ ಹೆಚ್ಚು ವಹಿವಾಟು ನಡೆಯುವ ಎಳನೀರು ಮಾರುಕಟ್ಟೆ (ಎಪಿಎಂಸಿ) ಮಂಡ್ಯ ಜಿಲ್ಲೆಯ ಮದ್ದೂರು ಪಟ್ಟಣದಲ್ಲಿದೆ. ದಿನದಿಂದ ದಿನಕ್ಕೆ ತೆಂಗಿನ ಕಾಯಿ ಬೆಲೆ ಗಗನಕ್ಕೇರುತ್ತಿದೆ. ಆದರೆ ತೆಂಗು ಬೆಳೆಗಾರರು ಹಾಗೂ ಉಪ ಉತ್ಪನ್ನ ತಯಾರಕರು ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿರುವುದು ವಿಪರ್ಯಾಸದ ಸಂಗತಿ. ತೆಂಗು ಹಾಗೂ ಅದರ ಉಪ ಉತ್ಪನ್ನಗಳ ಬೆಳೆಗಾರರು ಮುಖ್ಯವಾಗಿ ಹವಾಮಾನ ಬದಲಾವಣೆ, ಇಳುವರಿ ಕುಸಿತ, ರೋಗಗಳು, ಬೆಲೆ ಏರಿಳಿತ, ಮಾರುಕಟ್ಟೆ ಸಮಸ್ಯೆಗಳು, ಬೆಂಬಲ ಕೊರತೆ, ಮೂಲಸೌಕರ್ಯದ ಕೊರತೆ ಮತ್ತು ಉಪ ಉತ್ಪನ್ನಗಳಿಗೆ ಸಮರ್ಪಕ ಮಾರುಕಟ್ಟೆ ಲಭ್ಯವಿಲ್ಲದಿರುವುದು ಸೇರಿದಂತೆ ಹಲವಾರು ಗಂಭೀರ ತೊಂದರೆ ಎದುರಿಸುತ್ತಿದ್ದಾರೆ.

ಮಂಗಗಳ ಹಾವಳಿಯಿಂದ ಬೆಳೆನಷ್ಟ

ಮಂಗನ ಕಾಟದಿಂದ ಉತ್ತರ ಕನ್ನಡ ಜಿಲ್ಲೆಯ ತೆಂಗು ಬೆಳೆಗಾರರು ಭಾರಿ ನಷ್ಟ ಅನುಭವಿಸುತ್ತಿದ್ದಾರೆ. ತೆಂಗಿನ ತೋಟಗಳಿಗೆ ನುಗ್ಗುವ ವಾನರ ಸೇನೆ, ಬೆಳೆಯುವ ಹಂತದಲ್ಲಿರುವ ಎಳನೀರನ್ನು ಕಿತ್ತು, ನೀರು ಕುಡಿದು ಬಿಸಾಡುತ್ತದೆ. ಅಲ್ಲದೆ, ನುಸಿ ಪೀಡೆಯಿಂದಲೂ ಇಳುವರಿ, ಕಾಯಿಗಳ ಗಾತ್ರ ಕುಂಠಿತವಾಗುತ್ತಿದೆ. ದುಂಬಿಗಳು ಮರಗಳನ್ನು ನಾಶಪಡಿಸುತ್ತಿವೆ ಎನ್ನುತ್ತಾರೆ ಬೆಳೆಗಾರ ನಾಗರಾಜ ಹೆಗಡೆ. ಉತ್ತರಕನ್ನಡ ಜಿಲ್ಲೆಯಲ್ಲಿ 10,706 ಹೆಕ್ಟೇರ್‌ನಷ್ಟು ತೆಂಗಿನ ಬೆಳೆ ಇದ್ದು, ವಾರ್ಷಿಕ 83 ಸಾವಿರ ಟನ್ ತೆಂಗು ಉತ್ಪಾದನೆಯಾಗುತ್ತಿದ್ದು, ಬಹುಪಾಲು ಕುಮಟಾ ತಾಲೂಕು ಪೂರೈಸುತ್ತದೆ.

Vendors, residents oppose flower market at GKVK

BENGALURU, DHNS

Dec Hrd Pg 04

The state government's plan to build an international flower market on five acres of GKVK land, shifting traders from KR Market, faces stiff opposition from vendors and residents.

The project requires felling 942 trees on the campus, sparking protests from residents and environmentalists.

"GKVK has long been a green lung for this part of the world. Cutting down over 900 trees for the sake of a flower market or anything else is not acceptable. Is the government even aware of the impact of this kind of tree felling?" questioned Sudhir S, a resident of Judicial Layout.

Professors at the University of Agricultural Sciences echoed similar concerns.



The GKVK campus. DH FILE PHOTO

"The GKVK campus is known for its biodiversity. All this land is used for research. If we lose five acres and 942 trees for this new project, it will have a negative impact on our ongoing and future research projects. Also, there are chances of us losing several precious tree species," a professor and environmentalist told *DH*.

The 942 trees identified for felling include silver oaks, cashew plants, coconut trees, and five varieties of mango trees, all between seven and 10 years old.

SUDHIR S
A resident of Judicial Layout

> GKVK has long been a green lung for this part of the world. Cutting down over 900 trees for the sake of a flower market or anything else is not acceptable. Is the government even aware of the impact of this kind of tree felling?

GM Diwakar, president of the KR Market Flower Merchants' Association, called the new market "a disaster from the start".

"The government is already trying their luck with the Chikkaballapura APMC, and it is not working in its favour. This new market at GKVK will again be very close to the Chikkaballapura APMC. It is located in a corner of the city and is unlikely to draw any crowds. KR Market has its location working in its favour. It is centrally located and well-connected. The move is unscientific and we will go to court against the decision," Diwakar said.

About 136 flower vendors and 96 garland vendors are set to be shifted to the new market.

"Instead of building a whole new market for vendors within the market, the government must make an effort to facilitate the vendors who set up shop on the footpaths and roads outside the market. That will even solve the traffic problem in the area," he added.

K'taka to register 2 new jamun varieties

BOSKY KHANNA @Bengaluru

Hindu Pg 02

WHILE consumers know the names of most of the varieties of mangoes they consume, there are many other vegetables and fruits that are consumed on a daily basis, but people do not know their names. One of the fruits in the list is jamuns- also known as Black plum or lava plum.

The Indian Council for Agricultural Research (ICAR)- Indian Institute of Horticultural Research (IIHR) have successfully developed new varieties of jamuns which will soon be registered and patented. This is apart from the three new jamun varieties that a Bengaluru-based progressive farmer, NC Patel, has grown in his land, which is also going to be registered and then be available in the market.

Dr G Karunakaran, principal scientist, ICAR-IIHR, said, of the two new varieties that have been developed, one is Jamun Nerantara, which is found near Pavagada. The variety is found in a land belonging to one farmer, and he is protecting the species under the Protection of Plant Varieties and Farmers' Rights Authority (PPVFRA). This is because there is only one tree that is producing this variety, which is unique because of its sweetness, chewy texture and seed.



The other variety is yet to be named. This one has been developed in the institute and is presently called IIHR-JI. Its uniqueness is the size, each measuring 23-24 grams and each tree bears around 100 Kg of fruits. This is so far the largest variety and is less astringent, said Karnunakaran.

As per ICAR-IIHR, Karnataka already has multiple varieties of jamuns, including the Dupdal variety from north Karnataka, Siddamani jamun (also known as Chintamani jamun) and two varieties from Bagalkot.

Karunakaran added that, unlike other fruits, the variety of the jamuns changes region-wise and it depends upon the soil, environmental influence, climatic conditions, gene pool and method of cultivation. Work on patenting and registering the new varieties is being done, and trials on an Indian basis have already started.

He added that a large number of jamun fruits that consumers consume in the market also come from Andhra Pradesh, Tamil Nadu and Kerala.

Explaining his new produce, Patel said, he started cultivating three new varieties--Patel Jumbo, Patel Samrudhi and Patel Akal-- from 2005, and now around 150-200 plants of each variety are being grown.

ಕೃಷಿ ಹೊಂಡಗಳಿಗೆ ತಂತಿ ಬೇಲಿ ಕಡ್ಡಾಯ

HosadigantaPg 04

◆ **ದೊಡ್ಡಬಳ್ಳಾಪುರ:** ಕೃಷಿ ಇಲಾಖೆಯಿಂದ ಕೃಷಿ ಭಾಗ್ಯ ಯೋಜನೆಯಲ್ಲಿ ರೈತರು ಕೃಷಿ ಚಟುವಟಿಕೆಗಳಿಗೆ ಕೃಷಿ ಹೊಂಡವನ್ನು ನಿರ್ಮಿಸಿಕೊಂಡಿದ್ದಾರೆ. ಅವುಗಳಿಗೆ ತಂತಿ ಬೇಲಿ ಅಥವಾ ಕಾಂಪೌಂಡ್ ನಿರ್ಮಿಸಿಕೊಳ್ಳುವುದು ಕಡ್ಡಾಯವಾಗಿರುತ್ತದೆ. ತಂತಿ ಬೇಲಿ, ಕಾಂಪೌಂಡ್ ನಿರ್ಮಾಣಕ್ಕೆ ಶೇ.25 ರಷ್ಟು ಸಹಾಯಧನ ಇಲಾಖೆಯಿಂದ ಪಾವತಿಸಲಾಗುವುದು. ರೈತರು ಅಳವಡಿಸಿರುವ ಸೂಚನಾ ಪತ್ರಕ್ಕೆ ಎರಡು ಸಾವಿರ ರೂ ಸಹಾಯಧನ ಮಂಜೂರು ಮಾಡಲಾಗುವುದು. ಕೃಷಿ ಹೊಂಡಗಳಿಗೆ ಸುರಕ್ಷತಾ ಕ್ರಮವನ್ನು ಅಳವಡಿಸುವುದು..ಹೊಂಡದ ಮಾಲೀಕರ ಜವಾಬ್ದಾರಿಯಾಗಿದೆ. ಆದ್ದರಿಂದ ಎಲ್ಲಾ ರೈತರು ತಮ್ಮ ತಮ್ಮ ಕೃಷಿ ಹೊಂಡಗಳಿಗೆ ಪ್ರಾಣಿಗಳು, ಮನುಷ್ಯರು, ಮಕ್ಕಳು ಬೀಳದಂತೆ ಹೊಂಡದಲ್ಲಿ ಯಾವುದೇ ಅವಘಡಗಳು ಸಂಭವಿಸದಂತೆ ಜಾಗ್ರತೆಯನ್ನು ವಹಿಸಬೇಕು. ಆದ್ದರಿಂದ ಶೀಘ್ರವಾಗಿ ಕೃಷಿ ಹೊಂಡಕ್ಕೆ ಸೂಕ್ತ ರೀತಿಯ ಸೂಚನಾ ಫಲಕ ಅಳವಡಿಸಬೇಕು. ಹೊಂಡದ ಸುತ್ತ ತಂತಿಬೇಲಿ ಅಥವಾ ಸುತ್ತಲು ಕಾಂಪೌಂಡ್ ನಿರ್ಮಾಣ ಮಾಡಿಕೊಂಡು ಜಾಗ್ರತೆವಹಿಸಲು ಜಂಟಿ ಕೃಷಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರೈತರ ಕಂಪ್ಲೇಂಟ್ಸ್‌ಗೆ ವಿಶೇಷ ಪೋರ್ಟಲ್

Vijayavani Pg 02

ನವದೆಹಲಿ: ರೈತರಿಂದ ದೂರು-ಸಲಹೆ ಪಡೆಯಲು ಮತ್ತು ಅವರ ಸಮಸ್ಯೆಗಳನ್ನು ಇತ್ಯರ್ಥಗೊಳಿಸಲು ಅನುಕೂಲವಾಗುವಂತೆ ಪ್ರತ್ಯೇಕ ವಿಶೇಷ ಪೋರ್ಟಲ್ ರಚಿಸುವಂತೆ ಅಧಿಕಾರಿಗಳಿಗೆ ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಸೋಮವಾರ ಸೂಚಿಸಿದ್ದಾರೆ.ಕಾಲ್ ಸೆಂಟರ್‌ಗಳು ಮತ್ತು ಇತರ ಪೋರ್ಟಲ್‌ಗಳ ಮೂಲಕ ರೈತರಿಂದ ಬಂದ ದೂರುಗಳನ್ನು ಪರಿಶೀಲಿಸಲು ನಡೆಸಿದ ಉನ್ನತ ಮಟ್ಟದ ಸಭೆಯಲ್ಲಿ ಸಚಿವರು ಕಳಪೆ ಗುಣಮಟ್ಟದ ರಸಗೊಬ್ಬರ, ಬೀಜಗಳು ಮತ್ತು ಕೀಟನಾಶಕಗಳಿಗೆ ಸಂಬಂಧಿಸಿದ ದೂರುಗಳ ಬಗ್ಗೆ ಅಧಿಕಾರಿಗಳಿಂದ ಮಾಹಿತಿ ಪಡೆದರು.



■ ಕೇಂದ್ರ ಕೃಷಿ ಸಚಿವರ ಸೂಚನೆ

'ಬಹು ಪೋರ್ಟಲ್‌ಗಳ ಬದಲಿಗೆ ಒಂದೇ ಪೋರ್ಟಲ್ ಇದ್ದರೆ ನಿಯಮಿತವಾಗಿ ಪರಿಶೀಲಿಸಿ ಶೀಘ್ರ ಪರಿಹಾರ ಒದಗಿಸಲು ಅನುಕೂಲವಾಗುತ್ತದೆ. ರೈತರನ್ನು ಲೂಟಿಯಾಗದಂತೆ ತಡೆಯುವುದಕ್ಕಾಗಿ ಕಳಪೆ ರಸಗೊಬ್ಬರ, ಬೀಜ ಮತ್ತು ಕೀಟನಾಶಕಗಳ ಮಾರಾಟವನ್ನು ಕಟ್ಟುನಿಟ್ಟಾಗಿ ನಿಲ್ಲಿಸಬೇಕು' ಎಂದರು.

ಕಬ್ಬಿಣಕ್ಕಾಗಿ ಹರಿವೆ ಸೊಪ್ಪು!

Viswavani Pg 12

● ಅಜಯ್ ಅಂಚೆಪಾಳ್ಯ

ಗ್ರಾಮೀಣ ಬದುಕಿನ ಹಿನ್ನೆಲೆಯ ದಿನಚರಿಯಲ್ಲಿ 'ಸೊಪ್ಪಿನ ಸಾರು' ಬಹು ಮುಖ್ಯ ರಿಸಿಪಿ. ನಮ್ಮ ಗ್ರಾಮೀಣರು ಸೊಪ್ಪುಗಳನ್ನು ಆಹಾರದಲ್ಲಿ ಧಾರಾಳವಾಗಿ ಸೇವಿಸುತ್ತಿದ್ದರು. ಈಚಿನ ವರ್ಷಗಳಲ್ಲಿ, ಸೊಪ್ಪಿನ ಬಳಕೆ ತುಸು ಕಡಿಮೆ ಎಂದೇ ಹೇಳಬಹುದು; ಅದರಲ್ಲೂ ಮುಖ್ಯವಾಗಿ, ಮಧ್ಯಾಹ್ನದ ಆಹಾರಕ್ಕಾಗಿ, ವಿವಿಧ ಸಂದರ್ಭಗಳ ಆಹಾರಕ್ಕಾಗಿ ಹೋಟೆಲ್ ಮತ್ತು ಆನ್‌ಲೈನ್ ವ್ಯವಸ್ಥೆ ಯನ್ನು ನಂಬಿರುವ ನಗರಿಗರಿಗೆ, ಸೊಪ್ಪಿನ ಸಾಂಬರಿನ ಲಾಭ ದೊರಕುತ್ತಿಲ್ಲ. ಎಂದೇ ಹೇಳಬಹುದು ಸೊಪ್ಪುಗಳ ಪೈಕಿ, ನಮ್ಮ ರಾಜ್ಯದಲ್ಲಿ ಹೆಚ್ಚು ಪರಿಚಿತವಾಗಿರುವುದು ಹರಿವೆ ಸೊಪ್ಪು. ಕೆಂಪು ಮತ್ತು ಹಸಿರು ತಳಿಗಳಲ್ಲಿ ಬೆಳೆಯುವ ಸೊಪ್ಪು ಹಲವು ಖನಿಜಾಂಶಗಳ ಆಗರ.



- ಹರಿವೆ ಸೊಪ್ಪಿನಲ್ಲಿ ವಿಟಮಿನ್ ಎ, ಸಿ ಮತ್ತು ಕೆ ಇದೆ. ಜತೆಗೆ, ಕ್ಯಾಲ್ಸಿಯಂ, ಮ್ಯಾಗ್ನೀಶಿಯಂ ಮತ್ತು ಪೊಟಾಶಿಯಂ ಖನಿಜಾಂಶಗಳು ಲಭ್ಯ. ಇದರಲ್ಲಿರುವ ಅಧಿಕ ಪ್ರಮಾಣದ ಕ್ಯಾಲ್ಸಿಯಂ ಮತ್ತು ವಿಟಮಿನ್ ಕೆ, ದೇಹದ ಮೂಳೆಯ ಬೆಳವಣಿಗೆಗೆ ಸಹಕಾರಿ.
- ಹರಿವೆ ಸೊಪ್ಪಿನಲ್ಲಿರುವ ವಿಟಮಿನ್ ಸಿ, ಒಂದು ಆ್ಯಂಟಿ ಆಕ್ಸಿಡೆಂಟ್ ಆಗಿದ್ದು, ನಮ್ಮ ದೇಹದ ಪ್ರತಿರೋಧ ಶಕ್ತಿಯನ್ನು ಉತ್ತಮಪಡಿಸುತ್ತದೆ. ಜತೆಗೆ ಸೊಪ್ಪಿನಲ್ಲಿ ಹಲವು ವಿಧದ ಆ್ಯಂಟಿಆಕ್ಸಿಡೆಂಟ್ ಇವೆ.
- ಕಬ್ಬಿಣದ ಅಂಶ ಕೊರತೆ ಇರುವವರು, ಹರಿವೆ ಸೊಪ್ಪಿನ ಸಾಂಬಾರನ್ನು ಸಾಕಷ್ಟು ಸೇವಿಸಿದರೆ, ದೇಹದಲ್ಲಿನ ಕಬ್ಬಿಣದ ಅಂಶ ಉತ್ತಮಗೊಳ್ಳುತ್ತದೆ. ಇದರಿಂದಾಗಿ ರಕ್ತ ಕಣಗಳ ಉತ್ಪಾದನೆ ಸ್ಥಿರವಾಗಿ, ರಕ್ತಹೀನತೆ ದೂರವಾಗುತ್ತದೆ.
- ಸೊಪ್ಪಿನಲ್ಲಿರುವ ಇನ್ನೂ ವಿವಿಧ ಖನಿಜಾಂಶಗಳಿಂದಾಗಿ, ಕೆಟ್ಟ ಕೊಲೆಸ್ಟ್ರಾಲ್ ದೂರವಾಗುತ್ತದೆ ಎಂದು ತಜ್ಞರು ಗುರುತಿಸಿದ್ದಾರೆ. ಉತ್ತಮ ನೆಲದಲ್ಲಿ, ಗುಣಮಟ್ಟದ ನೀರನ್ನು ಉಪಯೋಗಿಸಿ ಬೆಳೆದ ಸೊಪ್ಪನ್ನು ಪ್ರತಿದಿನ ಸಾಂಬಾರು ಮತ್ತು ಪಲ್ಯ ಮಾಡಿ ಸೇವಿಸಿ, ಆರೋಗ್ಯ ಉತ್ತಮಪಡಿಸಿಕೊಳ್ಳಿ!

ಸಿಂಹಗಳೊಂದಿಗೆ ಸೆಣಸಾಡುತ್ತಿದ್ದ ದೇಶಿ ಎಮ್ಮೆಗಳು

ಭಾರತದಲ್ಲಿ ಬಹಳಷ್ಟು ಜಾತಿಯ ಎಮ್ಮೆಗಳು ಕಾಣಸಿಗುತ್ತವೆ. ಅವುಗಳಲ್ಲಿ ಕೆಲವು ತಳಿಗಳು ವಿಶೇಷವಾಗಿವೆ.

ಧರಣಿ ಮಂಡಲ

• ಕೆ.ಎನ್. ಶೈಲೇಶ್ ಹೊಳ್ಳ

shyleshholla@gmail.com



ಭಾರತದಲ್ಲಿ ಸಾಕಷ್ಟು ಜಾತಿಯ ಎಮ್ಮೆ ಮತ್ತು ಕೋಣದ ತಳಿಗಳಿವೆ. ಇವುಗಳಲ್ಲಿ ವಿಶೇಷವಾಗಿ ಜಾಫ್ರಾಬಾದಿ, ಮುರ್ರಾ, ಸುರುತಿ, ಮಹಿಸಾನಾ ಮತ್ತು ಧಾರವಾಡಿ ತಳಿಗಳು ವಿಶಿಷ್ಟವಾದುದಾಗಿವೆ. ಜಾಫ್ರಾಬಾದಿ ತಳಿಯ ಬಗ್ಗೆ ಹೇಳಬೇಕೆಂದರೆ, ಇವು ಹೆಚ್ಚಾಗಿ ಗುಜರಾತ್‌ನಲ್ಲಿ ಕಂಡುಬರುತ್ತವೆ. ಕಛ್ ಮತ್ತು ಜಾಮ್‌ನಗರ್ ಜಿಲ್ಲೆಯಲ್ಲಿನ ಜನರು ಈ ಎಮ್ಮೆಯನ್ನು ಹೆಚ್ಚಾಗಿ ಸಾಕುತ್ತಾರೆ. ಇತ್ತೀಚೆಗಷ್ಟೇ ಕೆಲವರು ಕರ್ನಾಟಕದಲ್ಲೂ ಇವುಗಳನ್ನು ಸಾಕಾಣಿಕೆ ಮಾಡತೊಡಗಿದ್ದಾರೆ. ಜುನಾಗಡದ ಗೀರ್‌ನಾರ್ ಅರಣ್ಯ ಪ್ರದೇಶ ಮತ್ತು ಕಾಥೇವಾಡದ ದಕ್ಷಿಣ ಭಾಗದ ಗುಡ್ಡಗಾಡು ಪ್ರದೇಶಗಳೇ ಈ ಜಾತಿಯ ಎಮ್ಮೆಗಳ ಮೂಲಸ್ಥಾನ. ಇಲ್ಲಿಯ ಬಹುತೇಕ ಹಳ್ಳಿ ಮತ್ತು ಊರುಗಳಲ್ಲಿ ಸಾಮಾನ್ಯವಾಗಿ ಈ ಜಾತಿಯ ಎಮ್ಮೆಗಳನ್ನು ತುಪ್ಪ ತಯಾರಿಸುವುದಕ್ಕಾಗಿಯೇ ಸಾಕುತ್ತಾರೆ. ಇವುಗಳು ನೀಡುವ ಹಾಲಿನಲ್ಲಿ ಕೊಬ್ಬಿನಂಶ ಹೆಚ್ಚಾಗಿದ್ದು, ಪ್ರಪಂಚದ ಹೈನು ಪ್ರಾಣಿಗಳಲ್ಲಿಯೇ ಇದು ಗರಿಷ್ಟ ಎನ್ನಲಾಗಿದೆ. ಇವುಗಳು ಆಕಾರದಲ್ಲಿ ಬಹಳ ದೊಡ್ಡದಾಗಿದ್ದು ಹೆಚ್ಚಿನ ಮೇವನ್ನು ತಿನ್ನುತ್ತವೆ. ಸುಮಾರು 4 ರಿಂದ 5 ಅಡಿಗೂ ಹೆಚ್ಚಿನ ಎತ್ತರವಿರುವ ಇವುಗಳು ಒಂದು ಟನ್‌ವರೆಗೂ ತೂಕವನ್ನು ಹೊಂದಿರುತ್ತವೆ. ವಯಸ್ಕ ಎಮ್ಮೆಗಳಂತೂ ಒಮ್ಮೊಮ್ಮೆ ಕೋಟಿಗಳಲ್ಲಿ ತುಲನೆ ಆಗಿದ್ದು ಇದೆ. ಮಲ್ದಾರಿಸ್ ಬುಡಕಟ್ಟು ಜನಾಂಗದವರು ಇವುಗಳನ್ನು ಪಳಗಿಸುವಲ್ಲಿ ಹೆಚ್ಚು ಪರಿಣಿತಿಯನ್ನು ಹೊಂದಿದ್ದಾರೆ ಎನ್ನಲಾಗುತ್ತದೆ. ಪ್ರಸ್ತುತ ಭಾರತದಲ್ಲಿ 6 ಲಕ್ಷಕ್ಕೂ ಹೆಚ್ಚು ಜಾಫ್ರಾಬಾದಿ ಎಮ್ಮೆಗಳಿವೆ. 36 ರಿಂದ 40 ತಿಂಗಳಿಗೆ ಗರ್ಭ ಧರಿಸುವ ಇವುಗಳ ಕರುಗಳು ಸಾಮಾನ್ಯವಾಗಿ 35 ಕೆ.ಜಿ.ಯಷ್ಟು ತೂಕವನ್ನು ಹೊಂದಿರುತ್ತವೆ.

ಈ ಎಮ್ಮೆಗಳು ಹಿಂದೆ ಸಿಂಹಗಳ ಜೊತೆ ಹೋರಾಡುತ್ತಿದ್ದವು ಎಂದು ಹೇಳಲಾಗುತ್ತದೆ. ಮನುಷ್ಯರ ಜೊತೆ ಬೆರೆತ ನಂತರ ಇವುಗಳ ಒರಟುತನ ಕಡಿಮೆ ಆಗಿದೆ ಎನ್ನಲಾಗಿದೆ. ದಿನಕ್ಕೆ ಸುಮಾರು 25 ಲೀಟರ್‌ನಂತೆ ವರ್ಷಕ್ಕೆ 2,100 ರಿಂದ 2,300 ಲೀಟರ್ ವರೆಗೂ ಹಾಲು ನೀಡುವ ಸಾಮರ್ಥ್ಯವನ್ನು ಇವುಗಳು ಹೊಂದಿದೆ. ಇತ್ತೀಚೆಗೆ ಬೆಂಗಳೂರಿನ ಜಿಕೆವಿಕೆ ಆವರಣದಲ್ಲಿ ನಡೆದ ಕೃಷಿಮೇಳದಲ್ಲಿ ಜಾಫ್ರಾಬಾದಿ ಎಮ್ಮೆ ಜನರ ಗಮನ ಸೆಳೆದಿತ್ತು. ಬಂದವರನ್ನು ಹೆಚ್ಚು ಆಕರ್ಷಿಸಿತ್ತು.

ಎರಡನೆಯದು ಮುರ್ರಾ ಎಮ್ಮೆಗಳು. ಮುರ್ರಾ ಅಥವಾ ಮೃರಾ ಎಂದರೆ ಸುರುಟಿಕೊಂಡದ್ದು ಎಂದರ್ಥ. ತನ್ನ ಸುರುಟಿಕೊಂಡ ಕೊಂಬಿನಿಂದಲೇ ಇವುಗಳಿಗೆ ಈ ಹೆಸರು ಬಂದಿದೆ ಎನ್ನಲಾಗುತ್ತದೆ. ಇವುಗಳ ಕೊಂಬುಗಳು ಬುಡದಲ್ಲಿ ದಪ್ಪವಾಗಿದ್ದು ಮುಂದೆ ತಲೆಯ ಮೇಲೆ ತಿರುವಿಕೊಂಡು ತುದಿಯಲ್ಲಿ ಸುರುಳಿ ಸುತ್ತಿಕೊಂಡು ಟಗರಿನ ಕೊಂಬುಗಳಂತೆ ಇರುತ್ತದೆ. ಇವುಗಳು ನೋಡಲು ಬಹಳ ದೊಡ್ಡ ಮೈಕಟ್ಟಿನ ಪ್ರಾಣಿಗಳು. ಇವುಗಳ ಮಣಕಗಳು ಜಾಫ್ರಾಬಾದಿ ಎಮ್ಮೆಗಳ ಮಣಕಗಳಿಗಿಂತ ಬೇಗನೇ ಬೆದೆಗೆ ಬರುತ್ತವೆ. ದಕ್ಷಿಣ ಪಂಜಾಬ್ ಮತ್ತು ದೆಹಲಿ ಈ ತಳಿಗಳ ತವರೂರು. ಸಿಂಧು ನದಿಯ ತಪ್ಪಲಿನ ಪ್ರದೇಶಗಳಲ್ಲಿ ಶುದ್ಧವಾದ ಈ ಜಾತಿಯ ಎಮ್ಮೆಗಳು ಕಂಡುಬರುತ್ತವೆ. ಇವುಗಳು ಇನ್ನಿತರೆ ಎಮ್ಮೆಗಳಿಗಿಂತ ಹೆಚ್ಚು ಉಪಯುಕ್ತವಾದವುಗಳೆಂದು ಇವುಗಳನ್ನು ಭಾರತದ ಅನೇಕ ಪಟ್ಟಣಗಳಲ್ಲಿ ಹಾಗೂ ಡೇರಿ ಫಾರಂಗಳಲ್ಲಿ ಹಾಲು ಮತ್ತು ತುಪ್ಪಗಳಿಗಾಗಿ ಸಾಕಲಾಗುತ್ತದೆ.

ಸುರತಿ ಅಥವಾ ಸುರ್ತಿ ಜಾತಿಯ ಎಮ್ಮೆಗಳನ್ನು ಗುಜರಾತ್‌ನಾದ್ಯಂತ ಸಾಕಿಕೊಂಡಿರುವುದು ಕಂಡುಬರುತ್ತದೆ. ಸೂರತ್ ಮತ್ತು ಕೈರಾ ಜಿಲ್ಲೆಗಳು ಇವುಗಳ ತವರೂರು. ಮುರ್ರಾ ಮತ್ತು ಜಾಫ್ರಾಬಾದಿ ಎಮ್ಮೆಗಳೊಂದಿಗೆ ಹೋಲಿಸಿದರೆ ಇವುಗಳ ಆಕಾರ ಮತ್ತು ಗಾತ್ರ ಸಣ್ಣದು. ಎಮ್ಮೆಗಳಲ್ಲಿಯೇ ಇವುಗಳು ಹಾಲಿಗೆ ಬಹಳ ಉತ್ತಮವಾದವುಗಳೆಂದು ಹೆಸರುಗಳಿಸಿವೆ. ಇವುಗಳು ಬೇಗನೆ ಕರು ಹಾಕುವುದಷ್ಟೇ ಅಲ್ಲದೆ ಕಾಲಕಾಲಕ್ಕೆ ಕ್ರಮವಾಗಿ ಕರುಗಳನ್ನು ಹಾಕುತ್ತವೆ. ಇವುಗಳ ಕೋಡುಗಳು ಬಹಳ ಉದ್ದವಾಗಿ ಕತ್ತಿಯ ಆಕಾರವಾಗಿ ಅಗಲವಾಗಿರುತ್ತವೆ.



ಜಾಫ್ರಾಬಾದಿ ಎಮ್ಮೆ

ನಾಲ್ಕನೆಯ ತಳಿಯಾದ ಮಹಿಸಾನಾ ಎಮ್ಮೆಗಳು ಆಕಾರದಲ್ಲಿ ಮುರ್ರಾ ಜಾತಿಯ ಎಮ್ಮೆಗಳಿಗಿಂತ ಸಣ್ಣವು ಮತ್ತು ಸುರತಿ ಜಾತಿಯ ಎಮ್ಮೆಗಳಿಗಿಂತ ದೊಡ್ಡವಾಗಿವೆ. ಇವು ಮುರ್ರಾ ಮತ್ತು ಸುರತಿ ಎಮ್ಮೆಗಳ ಸಂಕರಣದಿಂದ ಹುಟ್ಟಿದ ತಳಿಗಳಾಗಿವೆ. ಒಂದರ್ಥದಲ್ಲಿ ಇವು ಮಧ್ಯಮ ತರಗತಿಯ ಎಮ್ಮೆಗಳಾಗಿದ್ದು, ಇವುಗಳ ಮಣಕಗಳು ಸಣ್ಣ ವಯಸ್ಸಿಗೆ ಬೆದೆಗೆ ಬರುತ್ತವೆ. ಇವುಗಳ ಪೀಳಿಗೆಯನ್ನು ಅಭಿವೃದ್ಧಿಗೊಳಿಸುವ ಉದ್ದೇಶದಿಂದ ಹೆಚ್ಚಾಗಿ ಮುರ್ರಾ ಜಾತಿಯ ಕೋಣಗಳನ್ನು ಸಂತಾನಾಭಿವೃದ್ಧಿಗಾಗಿ ಉಪಯೋಗಿಸುವುದು ಒಂದು ಸಾಂಪ್ರಾದಾಯಿಕ ಪದ್ಧತಿಯಾಗಿದೆ.

ಇನ್ನು ಧಾರವಾಡಿ ಎಮ್ಮೆಗಳನ್ನು ಹೊಳೆಸಾಲು ಎಮ್ಮೆ ಎಂದು ಸಹ ಕರೆಯಲಾಗುತ್ತದೆ. ಈ ಜಾತಿಯ ಎಮ್ಮೆಗಳು ಬಹುಮಟ್ಟಿಗೆ ಸುರತಿ ಜಾತಿಯ ಎಮ್ಮೆಗಳನ್ನು ಹೋಲುತ್ತವೆ. ಇವು ಮುರ್ರಾ ಮತ್ತು ಜಾಫ್ರಾಬಾದಿ ಎಮ್ಮೆಗಳಷ್ಟು ದೊಡ್ಡ ಆಕಾರದ ದನಗಳಾಗಿರದೆ ಕಡಿಮೆ ಆಹಾರದಲ್ಲಿ ಜೀವಿಸುತ್ತವೆ. ಇವು ನಿರಾಯಾಸವಾಗಿ ದೂರದವರೆಗೆ ತಿರುಗಾಡಿ ಮೇಯಬಲ್ಲವಾಗಿದ್ದು, ಕಡಿಮೆ ಖರ್ಚಿನಲ್ಲಿ ಸಾಕಬಹುದಾಗಿವೆ. ಹೆಚ್ಚು ಮೇವಿನ ಸೌಕರ್ಯವಿಲ್ಲದ ಪ್ರದೇಶಗಳಲ್ಲಿ ಮುರ್ರಾ, ಜಾಫ್ರಾಬಾದಿ ಮತ್ತು ಸುರತಿ ಜಾತಿಯ ಎಮ್ಮೆಗಳಿಗಿಂತ ಈ ಎಮ್ಮೆಗಳನ್ನು ಸಾಕುವುದು ಲಾಭದಾಯಕವೆಂದು ಹೇಳಲಾಗಿದೆ. ಇವುಗಳನ್ನು ಘಟಪ್ರಭಾ ಮತ್ತು ಮಲಪ್ರಭಾನದಿತಪ್ಪಲ ಪ್ರದೇಶದಲ್ಲಿ ಹೆಚ್ಚಾಗಿ ಸಾಕಲಾಗುತ್ತದೆ. ಇವು ತಮ್ಮ ಜೀವಿತಾವಧಿಯಲ್ಲಿ 5ಕ್ಕೂ ಹೆಚ್ಚು ಬಾರಿ ಕರು ಹಾಕುತ್ತವೆ. ಒಂದು ಸೂಲಿಗೆ ಅಂದರೆ 10 ತಿಂಗಳವರೆಗೆ ಸುಮಾರು 970 ಲೀಟರ್ ಹಾಲು ಕೊಡುತ್ತವೆ. ಕೊಟ್ಟಿಗೆಯಲ್ಲಿ ವೈಜ್ಞಾನಿಕ ರೀತಿಯಲ್ಲಿ ಸಾಕಿದ್ದೇ ಆದಲ್ಲಿ 1,200 ಲೀಟರ್‌ವರೆಗೂ ಹಾಲನ್ನು ಕೊಡಬಲ್ಲವು. ಇವುಗಳು ನೀಡುವ ಹಾಲಿನಲ್ಲಿ ಶೇಕಡಾ 7 ರಷ್ಟು ಮಾತ್ರ ಕೊಬ್ಬಿನಂಶವಿರುವುದನ್ನು ಸಂಶೋಧಕರು ಸ್ಪಷ್ಟಪಡಿಸಿದ್ದಾರೆ. 2021ರ ಅಂಕಿ ಅಂಶದ ಪ್ರಕಾರ ಉತ್ತರ ಕರ್ನಾಟಕದ 14 ಜಿಲ್ಲೆಗಳಲ್ಲಿ ಕಾಣಸಿಗುವ ಈ ಎಮ್ಮೆಗಳ ಸಂಖ್ಯೆ ಸುಮಾರು 12.05 ಲಕ್ಷದಷ್ಟಿದೆ. ಇವುಗಳ ಹಾಲಿನಲ್ಲಿ ಎಸ್.ಎನ್.ಎಫ್. ಪ್ರಮಾಣ ಹೆಚ್ಚಿರುವುದರಿಂದ ಕೋವಾ ಇಳುವರಿ ಕೂಡ ಹೆಚ್ಚಿಗೆ ಬರುತ್ತದೆಯಂತೆ. ಹೀಗಾಗಿ ಉತ್ತರ ಕರ್ನಾಟಕದ ಭಾಗದ ಸಿಹಿ ತಿನಿಸುಗಳಾದ ಧಾರವಾಡ ಪೇಢಾ, ಬೆಳಗಾವಿ ಕುಂದಾ, ಜಮಖಂಡಿ ಕಲ್ಲಿ ಪೇಢಾ, ಐನಾಪುರ ಪೇಢಾ; ಗೋಕಾಕ ಮತ್ತು ಅಮೀನಗಡ ಕರದಂಟು ತಿನಿಸುಗಳಿಗೆ ಇದರ ಹಾಲನ್ನೇ ಬಳಸಲಾಗುತ್ತಿದೆ. ಹೀಗೆ ತಯಾರಿಸಿದ ಸಿಹಿ ತಿನಿಸುಗಳು 15 ರಿಂದ 20 ದಿನಗಳವರೆಗೆ ಕೆಡುವುದಿಲ್ಲ ಮತ್ತು ಫ್ಲೇವರ್ ಕೂಡ ವಿಶಿಷ್ಟವಾಗಿರುತ್ತದೆ ಎಂದು ಹೇಳಲಾಗಿದೆ.

ಉತ್ತಮ ಇಳುವರಿ ಜೊತೆಗೆ ಕಡಿಮೆ ಕೊಬ್ಬು ಮತ್ತು ಹೆಚ್ಚು ಘನ ಕೊಬ್ಬು ಹೊಂದಿರುವ ಹಾಗೂ ಆರೋಗ್ಯಕ್ಕೆ ಪೂರಕವಾದ ಶುದ್ಧ ಹಾಲು ನೀಡುವ ವಿಶಿಷ್ಟ ಗುಣಲಕ್ಷಣದ ಈ ಧಾರವಾಡಿ ಎಮ್ಮೆ ತಳಿಗೆ ಈಗ ರಾಷ್ಟ್ರೀಯ ಮಾನ್ಯತೆ ದೊರೆತಿದೆ. ಭಾರತೀಯ ಕೃಷಿ ಅನುಸಂಧಾನ ಪರಿಷತ್‌ನ ಪಶು ಸಂಗೋಪನೆ ವಿಭಾಗವು ಇಂಡಿಯಾ-ಬಫೆಲೊ-0800 ಧಾರವಾಡಿ-01018 ಎಂದು ತಳಿ ಪ್ರವೇಶ ಸಂಖ್ಯೆಯನ್ನು ನೀಡಿದೆ. ಎಮ್ಮೆಗಳಲ್ಲೇ ರಾಷ್ಟ್ರೀಯ ಮಾನ್ಯತೆ ಪಡೆದ ರಾಜ್ಯದ ಮೊದಲ ತಳಿ ಇದು ಎಂಬ ಹಿರಿಮೆ ಇದರದ್ದಾಗಿದೆ. ಹೀಗೆ ದೇಶದ 18 ಎಮ್ಮೆ ತಳಿಗಳ ಸಾಲಿನಲ್ಲಿ ಧಾರವಾಡಿ ಎಮ್ಮೆ ತಳಿ ಹೊಸ ಸೇರ್ಪಡೆ ಆದಂತಾಗಿದೆ.

1970ರಿಂದಲೇ ಈ ಎಮ್ಮೆ ತಳಿಗೆ ಮಾನ್ಯತೆ ಪಡೆಯಲು ಧಾರವಾಡ ಕೃಷಿ ವಿಶ್ವವಿದ್ಯಾಲಯದ ಪಶು ವಿಜ್ಞಾನ ವಿಭಾಗ ಸತತ ಪ್ರಯತ್ನ ನಡೆಸಿತ್ತು. ಇದಕ್ಕೆ ಪೂರಕವಾಗಿ ಭಾರತೀಯ ಪಶು ವಂಶವಾಹಿ ಸಂಪನ್ಮೂಲ ಸಂರಕ್ಷಣೆಯ ರಾಷ್ಟ್ರೀಯ ಸಂಸ್ಥೆ ಹಾಗೂ ಕೃಷಿ ವಿವಿಯ ಪಶು ವಿಜ್ಞಾನ ವಿಭಾಗಗಳು ಸಂಶೋಧನೆ ನಡೆಸಿದ್ದವು. ಧಾರವಾಡ, ಗದಗ, ಬಾಗಲಕೋಟೆ, ಬೆಳಗಾವಿ ಜಿಲ್ಲೆಗಳ 64 ಹಳ್ಳಿಗಳಲ್ಲಿ 3,937 ಜನ ರೈತರ ಮನೆಯಲ್ಲಿನ 10,650 ಎಮ್ಮೆಗಳನ್ನು ಸಂಶೋಧನೆ ನಡೆಸಿ ತಳಿ ಶುದ್ಧತೆ ಕುರಿತು 2017ರಲ್ಲಿ ವರದಿಯೊಂದನ್ನು ಸಲ್ಲಿಸಲಾಗಿತ್ತು. ಹೀಗೆ ಸರ್ವ ಪ್ರಯತ್ನದ ಫಲವಾಗಿ ಶುದ್ಧ ತಳಿಯ ಧಾರವಾಡಿ ಎಮ್ಮೆಗೆ ರಾಷ್ಟ್ರೀಯ ಮಾನ್ಯತೆ ಸಿಕ್ಕಿತ್ತು. ಹೀಗೆ ಸೇರ್ಪಡೆಯಾದ ಎಮ್ಮೆ ತಳಿಯನ್ನು ಇನ್ನಷ್ಟು ಸಂರ್ವರ್ಧಿಸುವ ಕಾರ್ಯಕ್ಕೆ ಸರ್ಕಾರ ಇಲ್ಲಿಯವರೆಗೂ ಯಾವುದೇ ಕ್ರಮ ತೆಗೆದುಕೊಳ್ಳದೇ ಇರುವುದು ವಿಪರ್ಯಾಸ. ಹಾಗೆಯೇ ವಿಶ್ವವಿದ್ಯಾಲಯದ ನಿವೃತ್ತ ಪ್ರಾಧ್ಯಾಪಕ ವಿ.ಎಸ್. ಕುಲಕರ್ಣಿಯವರು ಸಹ ಈ ತಳಿಯ ಸಂವರ್ಧನೆಗೆ ಪೂರಕ ಬೆಳವಣಿಗೆಗಳು ಆಗಿಲ್ಲ ಎಂಬುದಾಗಿ ಬೇಸರ ವ್ಯಕ್ತಪಡಿಸಿದ್ದಾರೆ. ವಿವಿಧ ತಳಿಯ ಜಾನುವಾರುಗಳ ರಕ್ಷಣೆ ಹಾಗೂ ಅಭಿವೃದ್ಧಿಗೆ ದೇಶದ ಹಲವೆಡೆ ಸಂವರ್ಧನಾ ಕೇಂದ್ರಗಳಿವೆ. ಧಾರವಾಡ ಸಮೀಪದ ತೇಗೂರಿನಲ್ಲಿ ಮುರ್ರಾ ಹಾಗೂ ಸುರತಿ ತಳಿ ಎಮ್ಮೆಗಳ ಸಂವರ್ಧನಾ ಪ್ರಕ್ರಿಯೆ ನಡೆಯುತ್ತಿದೆ. ಆದರೆ ಸ್ಥಳೀಯವಾದ ಈ ತಳಿಯ ಅಭಿವೃದ್ಧಿ ಕೇಂದ್ರ ಸ್ಥಾಪಿಸದಿರುವುದು ರೈತರ ಮತ್ತು ಹೈನುಗಾರರ ಅಸಮಾಧಾನಕ್ಕೆ ಕಾರಣವಾಗಿದೆ. ◈

HosadigantaPg 06